


### ಕನ್ನಡ ನೈಜ ಸ್ಥಿತಿ ಅನಾವರಣ

ರಾಜ್ಯೋತ್ಸವದ ನವೆಂಬರ್ ತಿಂಗಳಿನಲ್ಲಿ ಪ್ರಕಟವಾದ ಕೃಷ್ಣ ಮಾಸಡಿ ಅವರ 'ಕನ್ನಡ ಕಣ್ಮರೆ' (ನ.17, ಸುಧಾ) ಮುಖಪುಟ ಲೇಖನ ಕನ್ನಡ ಭಾಷೆಯ ನೈಜ ಸ್ಥಿತಿಯನ್ನು ಅನಾವರಣ ಮಾಡಿತು.

-ಎಚ್.ಆನಂದಕುಮಾರ್, ಚಿತ್ರದುರ್ಗ/ ಸು.ವಿಜಯಲಕ್ಷ್ಮಿ, ಪಿ.ಗೋವಿಂದರಾಜ್, ಶಿವಮೊಗ್ಗ/ ಕಾಡನೂರು ರಾಮಶೇಷ, ಹುಲಿಮಂಗಲ/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

### ಕನ್ನಡಿಗರು ತಯಾರಿಲ್ಲ!

'ಎಂಥಾ ಒಳ್ಳೇ ಕನ್ನಡ...' ಓದಿದೆ. ಸರ್ಕಾರದ ಕಿವಿ ಹಿಂಡಲು ಕನ್ನಡ ಹೋರಾಟಗಾರರು ತಯಾರಿದ್ದಾರೆ; ಈ ಹೋರಾಟಗಾರರೊಂದಿಗೆ ಬೀದಿಗಿಳಿಯಲು ಅದೇ ಕನ್ನಡಿಗರು ಮಾತ್ರ ತಯಾರಿಲ್ಲ!

-ಹುರುಕಡ್ಲಿ ಶಿವಕುಮಾರ, ಹಗರಿಬೊಮ್ಮನಹಳ್ಳಿ

### ಸುಂದರ ವಿನ್ಯಾಸದ ಮುಖಪುಟ

'ಕನ್ನಡ ಕಣ್ಮರೆ' ಮುಖಪುಟ ಸುಂದರ ವಿನ್ಯಾಸವಾಗಿ ಆಕರ್ಷಕವಾಗಿ ಮೂಡಿ ಬಂದಿದೆ. ಅಂತೆಯೇ ರಾಜಕೀಯ ಛಾಯಾ ಚಿತ್ರಕಲೆ ಎರಡರಲ್ಲೂ ಹೆಸರಾದ ಎಂ.ವೈ. ಘೋರ್ಪಡೆ ಅವರ ಕುರಿತ ಲೇಖನದಲ್ಲಿ ಅವರು ಕ್ಲಿಕ್ಕಿಸಿದ ಚಿತ್ರಗಳನ್ನು ದೊಡ್ಡದಾಗಿ ಹಾಕಿದ್ದೇ ಸೂಕ್ತ. ಕೃಪಾಕರ ಸೇನಾನಿ ಪುಟ್ಟ ಬರಹವೂ ಸಕಾಲಿಕ.

-ಕೊ.ಸು. ನರಸಿಂಹಮೂರ್ತಿ, ಮೈಸೂರು/ ಎಚ್.ಎಸ್.ವಿಶ್ವನಾಥ್, ಶಿವಮೊಗ್ಗ

### ಅಗಲದ ಸಲಗ

ನನ್ನಂತಹ ಚಿತ್ರ ಸಂಗ್ರಹಕಾರನ ಫೈಲಿಗೆ ಘೋರ್ಪಡೆಯ ಸಲಗ ಶಾಶ್ವತವಾಗಿ ಸೇರಿಕೊಂಡಿತು. ಅವರು ಅಗಲಿದ ಸಲಗವಲ್ಲ. ಅಗಲದ ಸಲಗ! ('ಅಗಲ' ಎಂಬುದಕ್ಕೆ 'ವಿಶಾಲ' ಎಂಬ ಅರ್ಥವೂ ಇದೆಯಷ್ಟೆ!)

-ಕೊಕ್ಕಡ ವೆಂಕಟ್ರಮಣ ಭಟ್, ಮಂಡ್ಯ

### 'ಸುಧಾ' ವ್ಯಾಪ್ತಿಗೆ ಕನ್ನಡಿ

'ಸಮುದ್ರ ಮಥನ' ಒಂದುರೀತಿ ನಮ್ಮ 'ಸುಧಾ'ದ ವ್ಯಾಪಕತೆ ಏನೆಂಬುದಕ್ಕೆ ಕೈಗನ್ನಡಿಯಾಗಿದೆ. ಇಲ್ಲಿ ಕೇವಲ ಸಂಚಿಕೆಯ ಬಗೆಗೆ ಅಭಿಪ್ರಾಯ ಮಂಡನೆಯಾಗದೇ; ಆರೋಗ್ಯಕರ ಚರ್ಚೆ, ವಿಮರ್ಶೆ ಸಹಾ ನಡೆಯುವುದು 'ಸುಧಾ'ಕ್ಕೆ ಯಾವ ರೀತಿಯ ಓದುಗರು ಇರುತ್ತಾರೆ ಎನ್ನುವುದನ್ನು ತೋರಿಸಿಕೊಡುತ್ತದೆ.

-ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ಸರ್ಕಾರವೇ ತೂಗುಯ್ಯಾಲೆ!

ಅತಿ ಕಡಿಮೆ ಖರ್ಚಿನಲ್ಲಿ ಕಲಾತ್ಮಕವಾಗಿ ಸೇತುವೆಗಳನ್ನು ನಿರ್ಮಿಸುತ್ತಿರುವ ತೂಗು ಸೇತುವೆಗಳ ಸರದಾರ ಗಿರೀಶ್‌ರ ಸಾಧನೆಯನ್ನು ಸರ್ಕಾರದವರು ಇದುವರೆವಿಗೂ ಗುರುತಿಸದೇ ಇರುವುದು ಬೇಸರದ ಸಂಗತಿ. ಸರ್ಕಾರವೇ ತೂಗುಯ್ಯಾಲೆಯಲ್ಲಿರುವಾಗ ಹೇಗೆ ಸಾಧ್ಯ?

-ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ/ ನೆ.ಲ.ರಾಂ., ಬೆಂಗಳೂರು

### ವಿಕಾಸ ಎಂದರೆ ಕೆಟ್ಟ ಸ್ವರೂಪವೆ?

ಪದಬಂಧದಲ್ಲಿ 3ನೆಯ ಪದ ಎಡದಿಂದ ಬಲಕ್ಕೆ ಸೂಚಿಸಿರುವ ಸುಳಿವು 'ವಕ್ರ-ವಕ್ರ-ಒಟ್ಟಾರೆ ಕೆಟ್ಟ ಸ್ವರೂಪ' (3 ಅಕ್ಷರಗಳು) ಇದಕ್ಕೆ ನಿಮ್ಮ ಉತ್ತರ 'ವಿಕಾಸ' (ಸುಧಾ ನ. 10) ಕೊಟ್ಟಿರುವ ಸುಳಿವಿಗೆ ಇದು ಹೇಗೆ ಹೊಂದಿಕೆಯಾಗುತ್ತದೆಯೋ ತಿಳಿಯುತ್ತಿಲ್ಲ. 'ವಿಕಾಸ' ಎಂದರೆ 'ಪ್ರಗತಿ', 'ಮುನ್ನಡೆ.'

-ಶ್ರೀನಾಥ್ ಕೊನೇಟಿ, ಬೆಂಗಳೂರು

### ಅಧ್ಯಯನ ಯೋಗ್ಯ ಕಥೆ

ನೀಲಾ ಕೆ., 'ಕಂಗಳ ಮರೆಯ ಬೆಳಗು' ಕಥೆ ತನ್ನ ಕಾವ್ಯ ಧ್ವನಿಯಲ್ಲಿ ಆಧ್ಯಾತ್ಮಿಕ ಲೋಕದ ಝೇಂಕಾರ ಮೊಳಗಿಸಿತು. ಸತ್ವಪೂರಿತ ನಿರೂಪಣೆ, ಹೈದರಾಬಾದ್ ಕರ್ನಾಟಕದ ಮಣ್ಣಿನ ಸತ್ವವನ್ನು ಬೆಳಗಿದೆ. ವಿಶಿಷ್ಟ, ಅಧ್ಯಯನ ಯೋಗ್ಯ ಕಥೆ.

-ಕಿಂಸ್ತುಘ್ನ, ತುಮಕೂರು

### ಕಣ್ಣೀರು ಬಂತು

ಕಥೆಯಲ್ಲಿ 'ನಾ ಹೋದ ಮ್ಯಾಲೆ ನೀ ಹಾಂಗಿರುತಿ, ನಿನ ಮರಿಯಲಿ ಹ್ಯಾಂಗ ನಾ ಗುಣವಂತಿ...' ತತ್ವಪದ ಓದಿ ಕಣ್ಣಲ್ಲಿ ನೀರು ಬಂತು.

-ಬಿ.ಎಸ್.ಮುಳ್ಳೂರ, ಹಲಗತ್ತಿ

### ಚಿಕ್ಕ ಅಂಕಣ ಉಪಯುಕ್ತ

17 ನವೆಂಬರ್ 'ಸುಧಾ' ಓದು ಬಹಳ ಖುಷಿ ಕೊಟ್ಟಿತು. ಸಣ್ಣ ಸಣ್ಣ ಅಂಕಣಗಳು ತುಂಬಾ ಉಪಯುಕ್ತ. 'ವಿಚಾರ ಲಹರಿ' 'ಮಾತೇ ಮುತ್ತು' ಮತ್ತು ಆರೋಗ್ಯ ಲೇಖನ ಉಪಯುಕ್ತವಾಗಿದ್ದವು.

-ಮಧೂರು ಮೋಹನ ಕಲ್ಲೂರಾಯ, ಗೇರುಕಟ್ಟೆ, ಬೆಳ್ತಂಗಡಿ

### ಹಲವು ಸಕಾಲಿಕ ಲೇಖನಗಳು

ಕೆ.ಎಸ್. ಪವಿತ್ರರ 'ಆಧುನಿಕ ಬಾಣಂತನ...!' ಸಕಾಲಿಕ ಲೇಖನ. ವಸುಂಧರಾ ಭೂಪತಿಯವರ 'ಕಹಿಯಲ್ಲ ಈ ಸಕ್ಕರೆ ಕಾಯಿಲೆ' ಹಾಗೂ ಎಂ.ಕೆ. ಅವರ 'ಉಪಗ್ರಹ ಬಿತ್ತಲ್ಲೋ ಭೂಮಿ ಮ್ಯಾಗೆ' ಲೇಖನಗಳು ಮಾಹಿತಿ ಪೂರ್ಣ. ಗಣೇಶ ಕಾಳಿಸರರ 'ಹೂ ಹಕ್ಕಿಯ ಮಧುಪಾನ' ಛಾಯಾಚಿತ್ರ ಕಣ್ಮನ ಸೆಳೆದವು.

-ಶೈಲಜ ಪ್ರಸಾದ್, ಬೆಂಗಳೂರು

### 'ಹರಕೆಯ ಕೀಲಿ' ಇಲ್ಲೂ ಇದೆ

ವಂಡರ್ ಪುಟದ ಹರಕೆಯ ಕೀಲಿ! ಸುಭಾಸ ಯಾದವಾಡರ ಚಿತ್ರ ಸಹಿತ ಲೇಖನ ವಂಡರ್ ಆಗಿತ್ತು! ಶಿವಮೊಗ್ಗ ಜಿಲ್ಲೆಯ ಆಯನೂರಿನ ಹತ್ತಿರ ಇರುವ ಹಣಗೆರೆ ಕಟ್ಟೆಯಲ್ಲಿ ಮರಕ್ಕೆ ಹರಕೆಯ ಕೀಲಿ ಕಟ್ಟುವ ಪರಿಪಾಠ ಇದೆ. ಆದರೆ ಪ್ರೇಮಕ್ಕಾಗಿ ಅಲ್ಲ, ಅದಕ್ಕೆ ಕಾರಣಗಳೇ ಬೇರೆ!

-ಮಲ್ಲಯ್ಯ ಶ್ರೀರಾಂಪುರ, ಚಿತ್ರದುರ್ಗ/ ಎಂ.ಎಲ್. ಲಕ್ಷ್ಮಣ್‌ರಾವ್, ದಾವಣಗೆರೆ

### ಲೇಖಿಕಾಶ್ರೀ ಮತ್ತು ಕಥಾಸ್ಪರ್ಧೆ

ಲೇಖಿಕಾ ಸಾಹಿತ್ಯ ವೇದಿಕೆಯು 'ಲೇಖಿಕಾ ಶ್ರೀ' ಪ್ರಶಸ್ತಿ ಹಾಗೂ ರಾಜ್ಯಮಟ್ಟದ 'ಕಥಾಸ್ಪರ್ಧೆ' ಆಯೋಜಿಸಿದೆ. ಕಥೆ 6 ರಿಂದ 8 ಪುಟಗಳ ಒಳಗಿರಬೇಕು. ಆಸಕ್ತರು ಸ್ವರಚಿತ ಕಥೆಗಳನ್ನು ಡಿ. 10ರ ಒಳಗಾಗಿ ಶೈಲಜಾ ಸುರೇಶ್, 'ಲೇಖಿಕಾ' ಸಾಹಿತ್ಯ ವೇದಿಕೆ, ನಂ. 113, ಆರ್.ಹೆಚ್.ಬಿ. ಕಾಲೋನಿ, ಮಹದೇವಪುರ, ಬೆಂಗಳೂರು-48 ಈ ವಿಳಾಸಕ್ಕೆ ಕಳುಹಿಸಿಕೊಡಬೇಕು.

ಲೇಖಿಕಾಶ್ರೀ ಪ್ರಶಸ್ತಿಗೆ ಲೇಖಕರು 2010-2011 ರಲ್ಲಿ ಪ್ರಕಟವಾದ 'ಕಾದಂಬರಿ' ಮತ್ತು 'ಕಥಾ ಸಂಕಲನ'ಗಳನ್ನು ಈ ಮೇಲಿನ ವಿಳಾಸಕ್ಕೆ ಕಳುಹಿಸಿಕೊಡಬಹುದು. ಹೆಚ್ಚಿನ ವಿವರಗಳಿಗೆ: 9916378955 ಸಂಪರ್ಕಿಸಿ.




ಕೇರಳದ ಮಾಂತ್ರಿಕ ಜ್ಯೋತಿಷ್ಯರು ॐ ✝ ☪

ಕೇರಳದ ಮಳಿಯಾಳಿ ಕುಟ್ಟಿಚ್ಚಾತನ್‌ನಿಂದ ಶೀಘ್ರ ಪರಿಹಾರವಿದೆ.

ಹಲವಾರು ವರ್ಷಗಳಿಂದ ಪ್ರಸಿದ್ಧಿ ಪಡೆದಿರುವ ಇವರು ನಿಮ್ಮ ಭವಿಷ್ಯವನ್ನು ಹಸ್ತ, ಜಾತಕ, ರಾಶಿ ಪ್ರಶ್ನೆ, ಅಷ್ಟಮಂಗಳ ಪ್ರಶ್ನೆಯಿಂದ ತಿಳಿಸುತ್ತಾರೆ. ಉದಾ: ವಿದ್ಯೆ, ಉದ್ಯೋಗ, ವ್ಯಾಪಾರ, ವಿವಾಹ, ಸ್ತ್ರೀ ಪುರುಷ ವಶೀಕರಣ, ಮಾನಸಿಕ ಚಿಂತೆ, ಸಾಲದ ಬಾಧೆ, ಸತಿ-ಪತಿ ಕಲಹ, ಸಂತಾನ ದೋಷ, ಮರಣ ಭಯ, ಆರೋಗ್ಯ, ಮಾಟ ಕೃತಿಮ, ಬ್ರಹ್ಮ ಪಿಶಾಚಿಗಳಿಗೆ ಹಾಗೂ ಇನ್ನಿತರ ನಿಮ್ಮ ಯಾವುದೇ ರೀತಿಯ ಸಮಸ್ಯೆಗಳಿಗೆ ಶೀಘ್ರ ಪರಿಹಾರಕ್ಕಾಗಿ ಸಂಪರ್ಕಿಸಿ:

ವಿಳಾಸ: ಎಸ್. ಪೊದುವಾಳ್, ಕಾರ್ಲ ಟವರ್ಸ್, 1ನೇ ಮಹಡಿ, ಮಣ್ಣಗೋಪುರ ಬಳಿ ಮುಖ್ಯರಸ್ತೆ, ಕಾರ್ಕಳ (ದ.ಕ.)

ಪ್ರತಿ ತಿಂಗಳು ದಿ. 10 ರಿಂದ 13ರವರೆಗೆ ಹಾಸನದಲ್ಲಿ ಸಂಪರ್ಕಿಸಬಹುದು.

ಮೊ: 98445 54918, 94493 87974

ದೂರವಾಣಿ ಮುಖಾಂತರವು ವಿವರಗಳನ್ನು ಪಡೆಯಬಹುದು

ವಿ.ಸೂ.: ಸ್ತ್ರೀ-ಪುರುಷ ವಶೀಕರಣಕ್ಕೆ, ಗಂಧರ್ವ ಸಂಮ್ಮೋಹಿನಿ ಯಂತ್ರವನ್ನು ಮಾಡಿಕೊಡಲಾಗುವುದು.